ದಿನಾಂಕಃ 13.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ವಕೀಲರಿಂದಃ

(ಈ ಪ್ರಕರಣದ 2 ನೇ ಆರೋಪಿಯು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ಆತನ ವಿರುದ್ಧ SC 78/2017 ರಂತೆ split up case ಮಾಡಲಾಗಿದ್ದು ನಂತರ ಸದರಿ split up case ನ್ನು ಈ ಪ್ರಕರಣದ ಸೇರಿಸಲಾಗಿದೆ. ಪ್ರಾಸಾ.37 ರವರ ಮುಖ್ಯ ವಿಚಾರಣೆಯು ಈ ಹಿಂದೆ 2 ನೇ ಆರೋಪಿಯ ಗೈರುಹಾಜರಿಯಲ್ಲಿ ದಾಖಲಿಸಿದ್ದು ಈಗ ಸದರಿ 2 ನೇ ಆರೋಪಿಯು ಈ ಪ್ರಕರಣದಲ್ಲಿ ಲಭ್ಯವಿರುವುದರಿಂದ ಈ ಹಿಂದೆ ನಡಸಿರುವ ಮುಖ್ಯ ವಿಚಾರಣೆಯನ್ನು 2 ನೇ ಆರೋಪಿಗೂ ಕೂಡ ಮುಖ್ಯ ವಿಚಾರಣೆ ಎಂದು ಅಳವಡಿಸಿಕೊಂಡಿರುತ್ತಾರೆ. ಆ ರೀತಿ ಅಳವಡಿಸಿಕೊಳ್ಳಲು ತಮ್ಮದೇನು ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ)

ನಾನು ದಿಃ 11.07.2019 ರಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಾನು ತನಿಖೆಯನ್ನು ಕೈಗೊಂಡು ಬಂಧಿಸಿ ದಸ್ತಗಿರಿ ಕ್ರಮ ಜರುಗಿಸಿರುವ, ಸ್ವಇಚ್ಛಾ ಹೇಳಿಕೆ ಪಡೆದುಕೊಂಡು ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವ 2 ನೇ ಆರೋಪಿಯಾದ ಶಿವಕುಮಾರ ಯಾನೆ ಶಿವು ರವರನ್ನು ನೋಡಿದರೆ ಗುರುತಿಸಬಲ್ಲೆ. 2 ನೇ ಆರೋಪಿಯು ಕೇಂದ್ರ ಕಾರಾಗೃಹ ಮೈಸೂರಿನಲ್ಲಿದ್ದು ಅವರನ್ನು ವಿಸಿ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಸಾಕ್ಷಿಯು 2 ನೇ ಆರೋಪಿಯನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

ಅದೇ ರೀತಿ ನಾನು ಬಂಧಿಸಿ ವಿಚಾರಣೆಗೊಳಪಡಿಸಿದ 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. 1 ನೇ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು ಅವರನ್ನು ಗುರುತಿಸುವ

ಬಗ್ಗೆ ತಕರಾರು ಇಲ್ಲ ಎಂದು 1 ನೇ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವ ಮಹಿಳೆಯ ಚಹರೆಗೂ ಮತ್ತು ನಿಪಿ.3 ಹಾಗೂ 10 ರಲ್ಲಿಹೇಳಿರುವ ಶವದ ಚಹರೆಗೂ ವ್ಯತ್ಯಾಸ ಇತ್ತು ಎಂದರೆ ಸರಿಯಲ್ಲ. ಮನುಷ್ಯ ನಾಪತ್ತೆ ದೂರಿನಲ್ಲಿ ಮಹಿಳೆಯ ವಯಸ್ಸನ್ನು ಸುಮಾರು 25 ವರ್ಷ ಎಂದು ಹಾಗೂ ನಿಪಿ.3 ಮತ್ತು 10 ರಲ್ಲಿ ಮಹಿಳೆಯ ವಯಸ್ಸನ್ನು 30 ರಿಂದ 35 ಎಂದು ನಮೂದಿಸಲಾಗಿದೆ ಎಂದರೆ ಸರಿ. ವೈದ್ಯರು ಕೊಟ್ಟಿರುವ ಶವಪರೀಕ್ಷೆ ವರದಿಯನ್ನು ಹೊರತುಪಡಿಸಿ ಮೃತದೇಹದ ನಿರ್ದಿಷ್ಟವಾದ ವಯಸ್ಸನ್ನು ತಿಳಿದುಕೊಳ್ಳಲು ನಾನು ಬೇರೆ ಯಾವುದೇ ವೈಜ್ಞಾನಿಕ ವರದಿಯನ್ನು ಪಡೆದುಕೊಂಡಿಲ್ಲ.

ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವ ಮಹಿಳೆಯ ಎತ್ತರವರನ್ನು 5 ಅಡಿ ಎಂದು ನಮೂದಿಸಲಾಗಿದೆ ಮತ್ತು ನಿಪಿ.3 ಹಾಗೂ 10 ರಲ್ಲಿ ಶವದ ಎತ್ತರವನ್ನು 5.2 ಅಡಿ ಎಂದು ನಮೂದಿಸಲಾಗಿದೆ ಎಂದರೆ ಇರಬಹುದು. ನೀರಿನಲ್ಲಿ ಬಿದ್ದಾಗ ವಿಸ್ತೀರ್ಣದಲ್ಲಿ ವ್ಯತ್ಯಾಸ ಆಗುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನೀರಿನಲ್ಲಿ ಬಿದ್ದಾಗ ಮೃತದೇಹದ ವಿಸ್ತೀರ್ಣದಲ್ಲಿ ವ್ಯತ್ಯಾಸ ಆಗುವ ಬಗ್ಗೆ ನಾನು ವೈದ್ಯರಿಂದ ಪ್ರಮಾಣಪತ್ರ ಪಡೆದುಕೊಂಡಿಲ್ಲ.

ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವಂತೆ ಮೃತದೇಹದ ಮೇಲೆ ಪಿಂಕ್ ಬಣ್ಣದ ಸೀರೆ ಸಿಕ್ಕಿರಲಿಲ್ಲ. ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವಂತೆ ಮಹಿಳೆಯ ಎಡಗಾಲಿನ ಕಿರುಬೆರಳಿನ ಪಕ್ಕದ ಬೆರಳು ಕಿರುಬೆರಳಿಗಿಂತ ಚಿಕ್ಕದಾಗಿ ಇರುವ ವಿಷಯವನ್ನು ನಾನು ತಯಾರಿಸಿರುವ ಶವ ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವ

35 ಗ್ರಾಂ ಚಿನ್ನದ ಮಾಂಗಲ್ಯ ಸರವು ಮೃತದೇಹದಲ್ಲಿ ದೊರೆತಿಲ್ಲ. ಮಾಂಗಲ್ಯ ಸರದ ಬಗ್ಗೆ ನನ್ನ ತನಿಖೆಯಲ್ಲಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ಮಾಂಗಲ್ಯ ಸರದ ಬಗ್ಗೆ ಮೃತಳ ತಾಯಿಯನ್ನು ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಅಷ್ಟರಲ್ಲಿ ಕಡತವನ್ನು ಮುಂದಿನ ತನಿಖಾಧಿಕಾರಿಗೆ ವರ್ಗಾವಣೆ ಮಾಡಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ.

ನಿಪಿ.35 ರ ಮನುಷ್ಯ ನಾಪತ್ತೆ ದೂರಿನಲ್ಲಿ ಹೇಳಿರುವಂತಹ ಟೈಟನ್ ವಾಚ್, ಕಪ್ಪು ದಾರ ಮತ್ತು ಬಳೆ ಮೃತದೇಹದಲ್ಲಿ ಸಿಕ್ಕಿರಲಿಲ್ಲ ಎಂದರೆ ಇರಬಹುದು. ನಾನು ವಶಪಡಿಸಿಕೊಂಡಿರುವ ಕಾಲು ಚೈನು, ಕಾಲುಂಗುರ, ಕೈ ಉಂಗುರ, ಮಾಂಗಲ್ಯ ಸರ ಇವುಗಳನ್ನು ಅಕ್ಕಸಾಲಿಗರಿಂದ ತೂಕ ಮಾಡಿಸಿ ಪ್ರಮಾಣಪತ್ರ ಪಡೆದಿಲ್ಲ. ಅವಶ್ಯಕತೆ ಕಂಡುಬಂದಿರಲಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಾನು ವಶಪಡಿಸಿಕೊಂಡಿದ್ದೇನೆ ಎಂದು ಹೇಳುವ ಕಾಲುಂಗುರ ಮತ್ತು ಕೈ ಉಂಗುರ ಗಳ ಬಗ್ಗೆ ನಿಪಿ.35 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಪಿ.35 ರಲ್ಲಿ ಹೇಳಿರುಂತೆ ಕಿವಿಯಲ್ಲಿ ಇದ್ದ ಬಟನ್ ಡ್ರಾಪ್ಸ್‌ನ ತೂಕವನ್ನು ತಿಳಿದುಕೊಂಡಿಲ್ಲ. ಬಟನ್ ಡ್ರಾಪ್ಸ್ ಮತ್ತು ಬಂಗಾರದ ಗುಂಡುಗಳು ಬೇರೆ ಬೇರೆ ಎಂದರೆ ಸರಿ. ಪ್ರಾಸಾ.19 ರವರ ಬಳಿ ಇತ್ತು ಎಂದು ಹೇಳಲಾದ ಆಭರಣ ಬಟನ್ ಡ್ರಾಪ್ಸ್ ಅಲ್ಲ ಎಂದರೆ ಸರಿಯಲ್ಲ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಪ್ರಕಾಶ ವಿ.)
C/c 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ